ಎಸ್.ಆರ್. ರಾವಳ

ಕಲೆ: ಪ್ರವೀಣ್ ಆಚಾರ್ಯ

# ಬುರುಡಾಲಾಜಿ

ಜ್ಯೂಆಲಾಜಿ, ಬಯೋಲಜಿ, ಅಸ್ಟ್ರಾಲಾಜಿ, ಸೈಕಾಲಾಜಿ, ಕ್ರಿಮಿನಲಾಜಿ ಹೀಗೆ ಹಲವಾರು ಲಾಜಿಗಳ ಹೆಸರು ಕೇಳಿದ ನಿಮಗೆ ಇದ್ಯಾವುದಪ್ಪಾ 'ಬುರಡಾಲಾಜಿ' ಎಂಬ ಕುತೂಹಲ ಉದ್ಭವಿಸಿರಬಹುದಲ್ಲವೆ? ಮನುಷ್ಯನ ತಲೆಪರಟೆಯನ್ನು ಬುರುಡೆ ಎಂದು ಕರೆಯಲಾಗುತ್ತದೆ. ಬುರುಡೆ ಎಂಬ ಶಬ್ದವು ಇದಕ್ಕಷ್ಟೇ ಸೀಮಿತವಾಗಿಲ್ಲ. ಬುರುಡೆ ಎಂಬ ಶಬ್ದವು ಬರೀ ಸುಳ್ಳು ಅಥವಾ ತಳಬುಡವಿಲ್ಲದ ಒಣ ಮಾತುಗಳು ಎಂಬ ಅರ್ಥದಲ್ಲಿಯೂ ಬಳಕೆಯಾಗುತ್ತದೆ. ಒಬ್ಬರು ಇನ್ನೊಬ್ಬರ ಎದುರಲ್ಲಿ ಯಾವುದಾದರೂ ಒಂದು ವಿಷಯದ ಬಗ್ಗೆ ಹೇಳುತ್ತಿದ್ದರೆ, ಕೇಳುವ ಆ ವ್ಯಕ್ತಿಗೆ ಅದು ಸತ್ಯವೆಂದು ಮನವರಿಕೆಯಾಗದಿದ್ದಲ್ಲಿ, ಅಥವಾ ಹೇಳುವ ವಿಷಯವು ಅಪನಂಬಿಕೆ ಅಥವಾ ಅಸಂಗತವೆಂದು ಅನ್ನಿಸಿದಾಗ ಕೇಳುವಾತನು, "ಅದೆಲ್ಲ ನನಗೆ ಚೆನ್ನಾಗಿ ಗೊತ್ತಿದೆ, ನೀನು ಏನಾದರೂ ಹೇಳಿ ನನ್ನ ಹತ್ತಿರ ಬುರುಡೆ ಬಿಡಬ್ಯಾಡಪಾ" ಎಂದು ಹೇಳಿ ಹೇಳುತ್ತಿರುವವನ ಮಾತನ್ನು ತುಂಡರಿಸಬಹುದು. ಒಬ್ಬ ವ್ಯಕ್ತಿಯ ಬಗ್ಗೆ ದೋಷಾರೋಪಣೆ ಮಾಡುವಾಗ ಇಲ್ಲದ ಸಂಗತಿಗಳನ್ನು ಜೋಡಿಸಿ, ಅವರ ಮೇಲೆ ಗೂಬೆ ಕೂರಿಸುವ ಕೆಲಸ ಸಾಮಾನ್ಯವಾಗಿ ಎಲ್ಲಾ ರಂಗದಲ್ಲಿಯೂ ನಡೆಯುತ್ತಿರುತ್ತದೆ. ರಾಜಕೀಯದೊಳಗಂತೂ ಇಲ್ಲದ ಆರೋಪಗಳನ್ನು ಸಲ್ಲದ ರೀತಿಯಲ್ಲಿ ಅರ್ಥೈಸಿ, ಎದುರಾಳಿಗಳ ಬಣ್ಣ ಬಯಲು ಮಾಡುವ ಪ್ರಕ್ರಿಯೆ ಪ್ರಜಾಪ್ರಭುತ್ವದ ಹಕ್ಕಾಗಿ ಪರಿಣಮಿಸಿದೆ. ಅವರು ಹೇಳುವುದೆಲ್ಲ ಬರೀ ಬುರುಡೆ ಎಂದು ವಸ್ತುಸ್ಥಿತಿಯನ್ನು ಅಲ್ಲಗಳೆದು ಖುಲ್ಲಂಖುಲ್ಲಾ ಮಾತನಾಡುವ ಮಲ್ಲರಿಗೇನೂ ಕಡಿಮೆ ಇಲ್ಲ! ಬಹು ಚರ್ಚಿತವಾಗುವ ಮತ್ತು ಮಾಧ್ಯಮಗಳಲ್ಲಿ ಹೆಚ್ಚು ಬಳಕೆಯಾಗುವ 'ಬುರುಡೆ' ಕುರಿತಾಗಿ ಪ್ರಬಂಧ ಬರೆಯಲು ಯೋಚಿಸಿ, ಅದಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳ ಸುತ್ತ ನನ್ನ ವಿಚಾರ ಲಹರಿ ಹರಿಸಿದಾಗ ರೂಪುಗೊಂಡದ್ದೇ ಈ ಬುರುಡಾಲಾಜಿ !

ಕೆಲವರು ಸುಳ್ಳು ಸುದ್ದಿ ಹರಡುವುದರಲ್ಲಿ ತುಂಬಾ ಪ್ರಾವೀಣ್ಯತೆ ಪಡೆದಿರುತ್ತಾರೆ. ನೈಜ ಸ್ಥಿತಿಯಲ್ಲಿ ಅವರು ಹೇಳುವ ಮಾತು ಸುಳ್ಳಾಗಿದ್ದರೂ ಸತ್ಯದ ನೆತ್ತಿಯ ಮೇಲೆ ಮೊಳೆ ಹೊಡೆದಷ್ಟು ಪ್ರಭಾವಶಾಲಿಯಾಗಿರುತ್ತದೆ. ಮುಂದೊಂದು ದಿನ ಅವರು ಹಾಗೆ ಹೇಳಿದ್ದು ಆ ಸತ್ಯವಾಗಿ ಕಂಡು ಬಂದರೆ ಆಗ ಇವರು ಮತ್ತೆ 'ಯೂ ಟರ್ನ್' ಹೊಡೆಯುತ್ತಾರೆ. "ನಾನು ಆ ರೀತಿ ಹೇಳಿಯೇ ಇಲ್ಲ, ಅದಕ್ಕೆ ಬೇರೆ ಅರ್ಥ ಕಲ್ಪಿಸಿದ್ದೀರಿ" ಎಂದು ತಿಪ್ಪೆ ಸಾರಿಸಿ, ಒಪ್ಪ ಓರಣ ಮಾಡಿ ಆ ಸನ್ನಿವೇಶದಿಂದ ಪಾರಾಗುವ ಮೇಧಾವಿಗಳು ನಮ್ಮ ನಡುವೆ ಸಾಕಷ್ಟು ಜನರಿದ್ದಾರೆ. ಸುಳ್ಳು ಸುದ್ದಿ ಅಥವಾ ಬುರುಡೆ ಸಂಗತಿಗಳನ್ನು ಹೇಳುವುದಕ್ಕಾಗಿ ಒಂದು ದಿನಾಚರಣೆ

